# ಪ್ರಿಯಾಂಕಾಳ ಮದುಮಗ

ಅಂತೂ ಇಂತೂ ಪ್ರಿಯಾಂಕಾ ಚೋಪ್ರಾಳ ಮದುವೆ ನಿಶ್ಚಿತಾರ್ಥದ ಸಮಾರಂಭ ಮುಗಿದಿದೆ. ಮುಂಬೈಯ ಪ್ರಿಯಾಂಕಾ ಮನೆಯಲ್ಲಿ ಬಾಲಿವುಡ್‌ನ ಹಲವು ತಾರೆಯರು ಮದುವೆ ನಿಶ್ಚಿತಾರ್ಥಕ್ಕೆ ಸಾಕ್ಷಿಯಾಗಿದ್ದಾರೆ. ಅಂತರಾಷ್ಟ್ರೀಯ ಖ್ಯಾತಿಯ ಗಾಯಕ ನಿಕೊಲಾಸ್ ಜೆರ್ರಿ ಜೊನಾಸ್, ಈಗ ಅಧಿಕೃತವಾಗಿ ಪ್ರಿಯಾಂಕಾಳ ಮದುಮಗ. ಈ ವರ್ಷವೇ ಮದುವೆಯೂ ಮುಗಿಯಬಹುದು. ಮದುವೆ ಯಾವ ದೇಶದಲ್ಲಿ ಎನ್ನುವುದು ಇನ್ನೂ ಗೊತ್ತಾಗಿಲ್ಲ.

ಯಾರೀತ ನಿಕ್ ಜೊನಾಸ್ ಎನ್ನುವ ಕುತೂಹಲವೀಗ ಉಳಿದಿಲ್ಲ. ಒಂದು ವರ್ಷದ ಹಿಂದೆ ಇಬ್ಬರ ನಿಕಟ ಗೆಳೆತನದ ಬಗ್ಗೆ ಸುದ್ದಿ ಹಬ್ಬಿದಾಗ, ಈ ಗೆಳೆತನ ಮದುವೆಯವರೆಗೆ ಹೋಗುತ್ತದೆ ಎಂದು ಯಾರೂ ನಂಬಿರಲಿಲ್ಲ. ಅದೇಕೆಂದರೆ, ಈ ಹಿಂದೆಯೂ ಹಲವು ನಟಿಯರ ಜತೆಗೆ ನಿಕ್‌ಗೆ ನಿಕಟ ಗೆಳೆತನವಿತ್ತು. ಪ್ರಿಯಾಂಕಾ ಜತೆಗೂ ಅಂತಹದ್ದೇ ತಾತ್ಕಾಲಿಕ ಗೆಳೆತನ ಎಂದೇ ಎಲ್ಲರೂ ಅಂದುಕೊಂಡಿದ್ದರು. ಆದರೆ ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಪ್ರಿಯಾಂಕಾ ಬೆನ್ನುಹತ್ತಿ ಮುಂಬೈಗೆ ಕುಟುಂಬ ಸಮೇತ ಬಂದ ನಿಕ್, ಮದುವೆಗೇ ತಯಾರಾದ.

25ರ ವರ, 36ರ ವಧು– ಭಾರತೀಯರ ಮಟ್ಟಿಗೆ ಸ್ವಲ್ಪ ಕಿರಿಕಿರಿ ಅನ್ನಿಸಲೂಬಹುದು. ಆದರೆ ಅದೆಲ್ಲ ಈಗ ಸಮಸ್ಯೆಯೇ ಅಲ್ಲ. ಏಕೆಂದರೆ ಇಬ್ಬರೂ ಅಂತರರಾಷ್ಟ್ರೀಯ ಮಟ್ಟದ ತಾರೆಯರು. ವಯಸ್ಸು ಇನ್ನೂ 25 ಆದರೂ, ಅಮೆರಿಕದಲ್ಲಿ ಗಾಯಕ, ಹಾಡು ಬರೆಯುವವ, ನಟ ಮತ್ತು ಮ್ಯೂಸಿಕ್ ಆಲ್ಬಂಗಳ ನಿರ್ಮಾಪಕನಾಗಿ ನಿಕ್‌ಗೆ ದೊಡ್ಡ ಹೆಸರಿದೆ. ಆತನ ಮೊದಲ ಸಿಂಗಲ್ ಆಲ್ಬಂ ಬಿಡುಗಡೆಯಾದಾಗ (2002) ಇನ್ನೂ ಹತ್ತರ ಹುಡುಗ. ಅದಕ್ಕೂ ಮುನ್ನ ಏಳು ವರ್ಷ ವಯಸ್ಸಿನಲ್ಲೇ ಆತ ನಾಟಕದಲ್ಲಿ ನಟಿಸಿದ್ದ. 2004ರಲ್ಲಿ ಬಿಡುಗಡೆಯಾದ ಆತನ ಮ್ಯೂಸಿಕ್ ಆಲ್ಬಂ ಅಷ್ಟೇನೂ ಸುದ್ದಿ ಮಾಡಲಿಲ್ಲವಾದರೂ ಕೊಲಂಬಿಯ ರೆಕಾರ್ಡ್ಸ್ ಕಂಪೆನಿಯ ಗಮನ ಸೆಳೆಯಿತು. ಇಬ್ಬರು ಅಣ್ಣಂದಿರು ಮತ್ತು ಒಬ್ಬ ತಮ್ಮನ ಜತೆ ಸೇರಿ ಸ್ವಂತ ಬ್ಯಾಂಡ್ 'ಜೊನಾಸ್ ಬ್ರದರ್ಸ್' ಕಟ್ಟಿದ ನಿಕ್ ಬಳಿಕ ಹಿಂದೆ ನೋಡಲಿಲ್ಲ. ಸಾಲುಸಾಲಾಗಿ ಯಶಸ್ವೀ ಆಲ್ಬಂಗಳು ಹೊರಬಂದವು. ಖ್ಯಾತಿ, ಹಣ ಒಟ್ಟಾದ ಬಳಿಕ ಸೋದರರ ಮಧ್ಯೆ ಸೈದ್ಧಾಂತಿಕ ಭಿನ್ನಮತ ಬಂದು ಬ್ಯಾಂಡ್ ಬೇರೆಯಾದರೂ ನಿಕ್ ಖ್ಯಾತಿ ಕುಂದಲಿಲ್ಲ. ಬಿಲ್‌ಬೋರ್ಡ್ 100ನಲ್ಲಿ ಈತನ ಸಿಂಗಲ್ ಆಲ್ಬಂಗಳು ಟಾಪ್‌ಟೆನ್ ಸ್ಥಾನವನ್ನು ಆಕ್ರಮಿಸಿದ್ದು ಸಹಜವೇ ಆಗಿತ್ತು.



ತಾರುಣ್ಯದಲ್ಲಿ ಜೊಹಾನ್ ಬ್ರದರ್ಸ್ ಎಲ್ಲರೂ 'ಪ್ಯೂರಿಟಿ ರಿಂಗ್' ಧರಿಸುತ್ತಿದ್ದರು. ಅದು ಎಲ್ಲರೂ ಶುದ್ಧ ಬ್ರಹ್ಮಚಾರಿಗಳು ಎಂಬುದರ ಸಂಕೇತ. 'ಚರ್ಚ್‌ನಲ್ಲಿ ಎಲ್ಲರೂ ರಿಂಗ್ ಧರಿಸಬೇಕೆಂದು ಹೇಳಿದ್ದರು. ಅದರ ಬಗ್ಗೆ ನನಗೆ ಸ್ಪಷ್ಟ ಕಲ್ಪನೆ ಇರಲಿಲ್ಲ' ಎಂದು ಹದಿನೈದರ ಹರೆಯದಲ್ಲೇ ನಿಕ್ ಹೇಳಿಕೆ ನೀಡಿದ್ದ. '20ರ ಹರೆಯದವರೆಗೂ ನಾನು ಹುಡುಗಿಯರ ಜತೆಗೆ ಹಾಸಿಗೆ ಹಂಚಿಕೊಳ್ಳಲಿಲ್ಲ' ಎಂದೂ ಇತ್ತೀಚೆಗೊಮ್ಮೆ ಹೇಳಿದ್ದ. ಆದರೆ ನಿಕ್‌ನ ನಿಕಟ ಗೆಳತಿಯರ ದೊಡ್ಡ ಪಟ್ಟಿಯನ್ನೇ ಪ್ರತಿ ವರ್ಷ ಮಾಧ್ಯಮಗಳು ಬಿಡುಗಡೆ ಮಾಡುತ್ತಿದ್ದವು.

ನಿಕ್‌ನ ಮೊದಲ ಸಂಗಾತಿ ಡಿಸ್ನಿ ಕಂಪೆನಿಯಲ್ಲಿ ಆತನ ಜೊತೆಗೆ ಹಾಡುತ್ತಿದ್ದ ಮಿಲೀ ಸೈರಸ್. ಇಬ್ಬರಿಗೂ 13ರ ಹರೆಯ. ಆಗಷ್ಟೇ ಹಾಡುಗಾರರಾಗಿ ಖ್ಯಾತಿ ಪಡೆಯತೊಡಗಿದ್ದರು. **Best of both worlds** ಟೂರ್‌ನಲ್ಲಿ ಇಬ್ಬರ ಪ್ರೇಮ, ಪ್ರೀತಿಯ ಬಗ್ಗೆ ಸುದ್ದಿ ಹರಡಿತ್ತು. ಆದರೆ ಒಂದು ವರ್ಷದಲ್ಲೇ ಈ ಗೆಳೆತನ ಮುರಿದುಬಿತ್ತು. 2009ರಲ್ಲಿ ನಟಿ ಸೆಲಿನಾ ಗೋಮ್ಸ್ ಜೊತೆಗೆ ನಿಕ್ ತಿರುಗಾಡತೊಡಗಿದ್ದ. ಮಿಲೀ ಮತ್ತು ಸೆಲಿನಾ ಇಬ್ಬರೂ ಏಕಕಾಲದಲ್ಲಿ ನಿಕ್‌ನನ್ನು ಪ್ರೇಮಿಸಲು ತೊಡಗಿದ್ದರಂತೆ. ಹಾಗೆಂದು ಸೆಲಿನಾ ಬಹಿರಂಗ ಹೇಳಿಕೆ ಕೊಟ್ಟಿದ್ದಳು. ಆದರೆ ಈ ಪ್ರೀತಿಯೂ ಹೆಚ್ಚು ಕಾಲ ಬಾಳಲಿಲ್ಲ.

ನಿಕ್ ಮೊದಲ ಮದುವೆ ನಡೆದದ್ದು 2009ರಲ್ಲಿ, ಕೇಶವಿನ್ಯಾಸಕಿ ಡೇನಿಯಲ್ ಡೆಲೀಸಾ ಜತೆಗೆ. ಆದರೆ ಮದುವೆಯೂ ಬಾಳಿಕೆ ಬರಲಿಲ್ಲ. ಅಲ್ಲಿಂದ 2017ರವರೆಗೂ ಒಬ್ಬರಲ್ಲ ಒಬ್ಬರ ಜೊತೆಗೆ ನಿಕ್ ಪ್ರೇಮಪ್ರಕರಣಗಳು ನಡೆದೇ ಇದ್ದವು. ಡೆಲ್ಟಾ ಗುಡ್ರೆಮ್, ಮಾಜಿ ವಿಶ್ವಸುಂದರಿ ಒಲಿವಿಯಾ ಕಲ್ಪೊ, ಖ್ಯಾತ ಮಾಡೆಲ್ ಡೆಂಡಲ್ ಜೆನ್ನರ್. ಗೋಲ್ಡನ್ ಗ್ಲೋಬ್ ವಿಜೇತ ನಟಿ ಕೇಟ್ ಹಡ್ಸನ್ (ಈಕೆ ನಿಕ್‌ಗಿಂತ 14 ವರ್ಷ ದೊಡ್ಡವಳು)– ಹೀಗೆ ಈ ಪಟ್ಟಿ ಬೆಳೆಯುತ್ತದೆ. 2017ರಲ್ಲೂ ನಿಕ್ ಇಬ್ಬರು ನಟಿಯರ ಜೊತೆಗೆ ವಿಫಲಪ್ರೇಮ ಹೊಂದಿದ್ದುದು ಸುದ್ದಿಯಾಗಿತ್ತು.

2014ರಲ್ಲಿ 'ಓಕೆ' ಮ್ಯಾಗಸಿನ್ ಈತನನ್ನು **Sexiest Man Alive** ಎಂದು ಪ್ರಕಟಿಸಿತ್ತು. ಆಗ ಪ್ರಕಟವಾದ ಈತನ ಫೋಟೋಗಳು ವಿಶ್ವದಾದ್ಯಂತ ಗಮನ ಸೆಳೆದಿದ್ದವು. 2016ರಲ್ಲಿ ಸೆಕ್ಸಿಯೆಸ್ಟ್ ಪುರುಷರ ಪಟ್ಟಿಯಲ್ಲಿ ಈತನ ಟಾಪ್ ಸಿಕ್ಸ್‌ನಲ್ಲಿದ್ದ. ಈತನ ಲಕ್ಷಾಂತರ ಅಭಿಮಾನಿಗಳ ಪಟ್ಟಿಯಲ್ಲಿ ಸಲಿಂಗಿಗಳ ಸಂಖ್ಯೆಯೂ ದೊಡ್ಡದಿತ್ತು. ಒಂದೊಮ್ಮೆ ಈತ ಸಲಿಂಗಿ ಎಂದೂ ಸುದ್ದಿ ಹಬ್ಬಿತ್ತು.

13ರ ಎಳವೆಯಲ್ಲೇ ನಿಕ್ ಜೊನಾಸ್‌ಗೆ ಡಯಾಬಿಟಿಸ್ (ಟೈಪ್ 1) ಕಾಟ ಕೊಡತೊಡಗಿತ್ತು. ಆ ಬಳಿಕ ಈತ ಡಯಾಬಿಟಿಸ್ ಅಭಿಯಾನಕ್ಕೆ ಸಂಬಂಧಿಸಿ ಸಾಕಷ್ಟು ಕೆಲಸದಲ್ಲಿ ತೊಡಗಿಕೊಂಡಿದ್ದಾನೆ. ಜಗತ್ತಿನಾದ್ಯಂತ ಡಯಾಬಿಟಿಸ್ ಬಗ್ಗೆ ಎಚ್ಚರ ಮೂಡಿಸುವ ಕೆಲಸದಲ್ಲಿ ಕೈಜೋಡಿಸಿ ದತ್ತಿಗಳನ್ನೂ ನೀಡಿದ್ದಾನೆ. ಹಾಗೆಯೇ ಅಮೆರಿಕದ ಶಾಲೆಗಳಲ್ಲಿ ಸಂಗೀತ ಕಲಿಸುವ ನಿಟ್ಟಿನಲ್ಲಿ 'ಬ್ಯಾಟಲ್ ಆಫ್ ಬ್ಯಾಂಡ್ಸ್' ಅಭಿಯಾನದಲ್ಲೂ ಈತ ಕೈಜೋಡಿಸಿ ಹೆಸರು ಮಾಡಿದ್ದ.

ಈಗ ಹೊಸ ಬಾಳ ಹೊಸ್ತಿಲಲ್ಲಿ ಭಾರತೀಯ ವಧುವನ್ನು ಹುಡುಕಿಕೊಂಡಿದ್ದಾನೆ. 171 ಕೋಟಿ ರೂಪಾಯಿ ನಿವ್ವಳ ಆಸ್ತಿಯ ಒಡೆಯ ನಿಕ್, ವರ್ಷಕ್ಕೆ 64 ಕೋಟಿ ರೂಪಾಯಿ ಆದಾಯವಿರುವ ವಧುವನ್ನು ಹುಡುಕಿಕೊಂಡಿರುವುದು ಸದ್ಯಕ್ಕೆ ಹಾಲಿವುಡ್ ಮತ್ತು ಬಾಲಿವುಡ್ ಎರಡೂ ಕಡೆ ದೊಡ್ಡ ಸುದ್ದಿಯೇ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65